ಅಖಿಲೇಶ್ ಮುಖ ಬಿಳಚಿಕೊಂಡಿತು. 'ಸಾರ್! ಮಸ್ಕರಿ ಮಾಡಬೇಡಿ! ಕಾರಣವೇನು?' ಅಂತ ಹೇಳಿ ಎಂದು ಜುಲ್ಮಿ ಮಾಡಿದ.

'ಕಾರಣ ಏನು ಅಂತ ನಾಳೆ ಬೆಳಗ್ಗೆ ಕೋರ್ಟ್‌ನಲ್ಲಿ ಗೊತ್ತಾಗುತ್ತೆ. ನಾನು ನಿನಗೆ ಕಾರಣ ಏನು ಅಂತ ಹೇಳುವ ಅಗತ್ಯವಿಲ್ಲ' ಎಂದರು ವಿಜಯ್.

ಇನ್‌ಸ್ಪೆಕ್ಟರ್ ಜೊತೆ ಬಂದಿದ್ದ ಇಬ್ಬರು ಪಿ.ಸಿ.ಗಳಾದ ಶಿವಣ್ಣ ಮತ್ತು ಮಲ್ಲಪ್ಪ ಬಂದು ಅಖಿಲೇಶ್‌ನನ್ನು ಪೊಲೀಸ್ ಜೀಪಿಗೆ ಕರೆದುಕೊಂಡು ಹೋಗಿ ಕೂರಿಸಿದರು. ಇತ್ತ ರೆವರೆಂಡ್‌ಗೆ ವಿಜಯ್ ಥ್ಯಾಂಕ್ಸ್! ಹೇಳಿ ಹೊರಟರು.

ಏಜೆಂಟ್ ರೆವರೆಂಡ್ ಹತ್ತು ನಿಮಿಷಗಳ ಕಾಲ ಇನ್‌ಸ್ಪೆಕ್ಟರ್ ವಿಜಯ್‌ರೊಂದಿಗೆ ಮಾತಾಡಿದಾಗ ಅವರಿಗೆ ಅಖಿಲೇಶ್ ಕುರಿತುಂತೆ ಮಹತ್ವದ ಮಾಹಿತಿಗಳು ತಿಳಿದು ಬಂದವು.

ಅಖಿಲೇಶನ ಮೂಲ ಊರು, ಜನ್ಮಸ್ಥಳ ಅಸ್ಸಾಂನ ಗುವಾಹಟಿ. ಅವನು ಮಂಗಳೂರಿನ ಸೆಂಟ್ ಲೂಯಿಸ್ ಎಂಜಿನಿಯರಿಂಗ್ ಕಾಲೇಜಲ್ಲಿ ಬಿ.ಇ. ಕಂಪ್ಯೂಟರ್‌ಸೈನ್ಸ್ ಓದಿದ್ದು. ಅವನು ಮಂಗಳೂರಿನಲ್ಲಿದ್ದಾಗ ಒಂದು ಘಟನೆ ನಡೆಯಿತು. 2011 ಮೇ ತಿಂಗಳ 6ನೇ ತಾರೀಖು ಭಾನುವಾರ ಸಂಜೆ 7 ಗಂಟೆಗೆ ಅಲ್ಲಿನ 'ವೇಕೆಂಟ್ ಬೀಚ್' ಬಳಿ ಇದೇ ಮಾದರಿಯಲ್ಲಿ ಕಾರಲ್ಲಿ ಕುಳಿತಿದ್ದ ಕ್ಯಾತರೀನ್ ಎಂಬ ಯುವತಿ ಹಠಾತ್ ಬೆಂಕಿ ಅನಾಹುತದಲ್ಲಿ ಕೊಲೆಯಾಗಿದ್ದಳು. ಆಗ ರಾಜ್ಯ, ರಾಷ್ಟ್ರದ ಎಲ್ಲಾ ಆರಕ್ಷಕರ ಠಾಣೆಗಳಿಗೆ ಮಂಗಳೂರಿನ ಪೊಲೀಸ್ ಕೇಂದ್ರ ಕಚೇರಿಯಿಂದ ಶಂಕಿತ ಆರೋಪಿಯ ರೇಖಾ ಚಿತ್ರ ಹೋಗಿತ್ತು. ಈ ಪ್ರಕರಣದಲ್ಲಿ ಕ್ಯಾತರೀನ್ ಕೊಲೆಯಾದಾಗ ಮೂರು ತಿಂಗಳ ಗರ್ಭಿಣಿಯಾಗಿದ್ದಳು. ಹಳೇ ದಾಖಲೆಗಳನ್ನು ಪರಿಶೀಲಿಸುವಾಗ ಈ ವಿಷಯ ಇನ್‌ಸ್ಪೆಕ್ಟರ್ ವಿಜಯ್‌ಗೆ ತಿಳಿದು ಬಂದಿತ್ತು.

ಈ ಮಾಹಿತಿಯ ಆಧಾರದ ಮೇಲೆ ಆ ರೇಖಾಚಿತ್ರಕ್ಕೆ ಈ ಅಖಿಲೇಶ್ ಭಾವಚಿತ್ರವನ್ನು ಹೋಲಿಸಿದಾಗ ಶೇ 99ರಷ್ಟು ಪರಸ್ಪರ ಹೋಲಿಕೆಯಾಗಿತ್ತು. ಜೊತೆಗೆ ಅಖಿಲಾಳ ಮರಣೋತ್ತರ ಪರೀಕ್ಷೆ ವರದಿಯಲ್ಲಿ ಆಕೆಯೂ ಮೂರು ತಿಂಗಳು ಗರ್ಭಿಣಿಯಾಗಿದ್ದಳೆಂದು ತಿಳಿದುಬಂದಿತ್ತು. ಯುವತಿಯರನ್ನು ತನ್ನ ಬಲೆಗೆ ಕೆಡವಿಕೊಂಡು ಅವರನ್ನು ಅನುಭವಿಸಿ ಆನಂತರ ಅವರನ್ನು ಕೊಲೆ ಮಾಡುವ ಒಬ್ಬ ಸೈಕೋ ಅಖಿಲೇಶ್ ಎಂಬುದು ಅವರ ತನಿಖೆಯಿಂದ ಹೊರಬಂದ ಅಂಶ. ಈ ವಿವರಗಳು ಸಿಕ್ಕಿದ್ದರಿಂದ ಅವನನ್ನು ಬಂಧಿಸಲು ಅವರಿಗೆ ಸಾಧ್ಯವಾಗಿತ್ತು.

## ಜಿ.ವಿ. ಪ್ರಭು

ಬ್ಯಾಂಕ್ ಉದ್ಯೋಗಿಯಾಗಿ ನಿವೃತ್ತರಾಗಿರುವ ಪ್ರಭು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಹೆಣ್ಣು ಗಂಡಿನ ನಡುವಿನ ಸೃಜನಾತ್ಮಕ ಸಂಬಂಧವನ್ನು ಅವರು ತಮ್ಮ ಕತೆಗಳಲ್ಲಿ ಬರೆಯುತ್ತ ಬಂದಿದ್ದಾರೆ. 35 ವರ್ಷಗಳಿಂದ ಕನ್ನಡ ಪತ್ರಿಕೆಗಳಿಗೆ ಬರೆಯುತ್ತಿರುವ ಅವರ 500 ಕತೆಗಳು ಪ್ರಕಟವಾಗಿವೆ. 'ಧರ್ಮಶಿಥಿಲ', 'ಪಂಚವಟಿ ಪ್ರಮಾದ' ಅವರ ಕಥಾಸಂಗ್ರಹಗಳು. ನಗೆಹನಿಗಳು ಹಾಸ್ಯ ಪ್ರಸಂಗಳನ್ನು ಬರೆದಿರುವ ಪ್ರಭು ಅವರದು ಓದುಗರಿಗೆ ಪರಿಚಿತ ಹೆಸರು. ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಯಲ್ದೂರು ಅವರ ಊರು.